ಶ್ರೀ ಆರ್. ಎನ್. ನಾಯಕ್.— ಮಳೆಯಲ್ಲಿ ಸತ್ತಿರುವವರ ಬಗ್ಗೆ ಮಾಹಿತಿ ಕೇಳಿದರೆ, ಹೀಗೆ ಹೇಳುತ್ತಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ನಾಳೆ ಮಳೆಯಿಂದಾಗಿರುವ ಅನಾಹುತದ ಬಗ್ಗೆ ಚರ್ಚೆಯಾಗುತ್ತದೆ. ಇದಕ್ಕೆ ಸಂಬಂಧಪಟ್ಟ ಎಲ್ಲಾ ವಿಚಾರಗಳು ಆದರಲ್ಲಿ ಬರುತ್ತವೆ.

ಮಸೀದಿಗಳಲ್ಲಿ ಆಜಾನ್ ಪ್ರಾರ್ಥನೆ ಸಲ್ಲಿಸುವುದು.

೨೯೧೭. **ಶ್ರೀ ಎ. ಎಂ. ಹಿಂಡಸಗೇರಿ (ಹುಬ್ಬಳ್ಳಿ).**— ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಆರ್. ಟಿ. ನಗರ ಪೋಲೀಸ್ ಠಾಣೆಯ ಸರಹದ್ದಿನಲ್ಲಿರುವ ಮಸೀದಿಗಳಲ್ಲಿ ''ಆಜಾನ್'' ಪ್ರಾರ್ಥನೆಗೆ ಉಪಯೋಗಿಸಿರುವ ಧ್ವನಿವರ್ಧಕದ ಮೇಲೆ ಪ್ರತಿಬಂಧಕವನ್ನು ಹಾಕಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಪ್ರಾತಃಕಾಲದ ''ಆಜಾನ್'' ಪ್ರಾರ್ಥನೆಗೆ ಧ್ವನಿವರ್ಧಕವನ್ನು ಉಪಯೋಗಿಸುವುದು ಒಂದು ಸಾಂಪ್ರದಾಯಕವಾಗಿದ್ದು, ಅದನ್ನು ಮುಂದುವರಿಸಿಕೊಂಡು ಹೋಗಲು ಅವಕಾಶ ಕೊಡಲಾಗುವುದೇ ?

ಇ) 'ಆಜಾನ್' ಪ್ರಾರ್ಥನೆಗೆ ಬೆಳಗಿನ ವೇಳೆ ಮಸೀದಿಗಳಲ್ಲಿ ಧ್ವನಿವರ್ಧಕವನ್ನು ಉಪಯೋಗಿಸಲು ಅನುಕೂಲ ಮಾಡಿಕೊಡುವಂತೆ ಕರ್ನಾಟಕ ಪೋಲೀಸ್ ಆಕ್ಟ್‌ನ್ನು ತಿದ್ದುಪಡಿ ಮಾಡಲು ಯಾವ ಪ್ರಸ್ತಾವನೆಯಾದರೂ ಸರ್ಕಾರದ ಮುಂದೆ ಇದೆಯೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಯವರು).—

ಅ) ಧ್ವನಿವರ್ಧಕವನ್ನು ಉಪಯೋಗಿಸಲು ಪ್ರತಿಬಂಧಕವನ್ನು ವಿಧಿಸಿರುವುದಿಲ್ಲ. ಆದರೆ, ಕಡಿಮೆ ಶಬ್ದ ಬರುವಂತೆ (ವಾಲ್ಯೂಂ) ಧ್ವನಿವರ್ಧಕವನ್ನು ಉಪಯೋಗಿಸಲು ಸೂಚನೆ ಕೊಡಲಾಗಿದೆ. ಮತ್ತು ಧ್ವನಿವರ್ಧಕವನ್ನು ಉಪಯೋಗಿಸಲು ಆ ಪ್ರದೇಶದ ಮಸೀದಿಗಳ ಧ್ವನಿವರ್ಧಕ ಪರವಾನಿಗಿಯನ್ನು ತೆಗೆದುಕೊಂಡಿಲ್ಲದ ಕಾರಣ ಪರವಾನಿಗೆ ತೆಗೆದುಕೊಳ್ಳಬೇಕೆಂದು ತಿಳಿಸಲಾಗಿದೆ.

ಆ) ಪ್ರಾತಃ ಕಾಲದ 'ಆಜಾನ್' ಪ್ರಾರ್ಥನೆಗೆ ಅವಕಾಶ ಕೊಡಲಾಗಿದೆ.

ಇ) ಕರ್ನಾಟಕ ಪೋಲೀಸ್ ಕಾಯ್ದೆ ೩೭ರ ಪ್ರಕಾರ ಬೆಳಗಿನ ೬ ಗಂಟೆಯಿಂದ ರಾತ್ರಿ ೧೦ಗಂಟೆಯವರೆಗೆ ಮಾತ್ರ ಧ್ವನಿವರ್ಧಕದ ಬಳಕೆಗೆ ಅವಕಾಶವಿದೆ. 'ಆಜಾನ್' ಪ್ರಾರ್ಥನೆ ಬೆಳಿಗ್ಗೆ ೫–೩೦ ಗಂಟೆಗೆ ಆರಂಭವಾಗುವುದರಿಂದ, ಈ ವಿಷಯವಾಗಿ ಬಂದಿರುವಂತೆ ಸತ್ತು ಹೋದವರಿಗೆ ಜನರಿಗೆ ಹೆಚ್ಚು ಉಪದ್ರವಾಗದಂತೆ ಧ್ವನಿವರ್ಧಕವನ್ನು ಬಳಸಬೇಕಾಗುತ್ತದೆ. ಕಾನೂನು ತಿದ್ದುಪಡಿ ಮಾಡುವ ವಿಷಯ ಸರ್ಕಾರದ ಮುಂದಿಲ್ಲ.

ಶ್ರೀ ಎ. ಎಂ. ಹಿಂಡಸ್ಗೇರಿ.— ಸ್ವಾಮಿ, ಮಸೀದಿಗಳಲ್ಲಿ ಅಲ್ಲಿರತಕ್ಕ ಜನರಿಗೆ ಮತ್ತು ಆ ಧರ್ಮದ ಜನರಿಗೆ ತಿಳಿಯುವ ಉದ್ದೇಶದಿಂದ ಆಜಾನ್ ಪ್ರಾರ್ಥನೆಯನ್ನು ಧ್ವನಿವರ್ಧಕಗಳ ಮೂಲಕ ಬಿತ್ತರಿಸುವುದು ವಾಡಿಕೆಯಲ್ಲಿದೆ. ಇದರಿಂದ ಬೇರೆಯವರಿಗೆ ತೊಂದರೆ ಕೊಡುವ ಉದ್ದೇಶ ಇಲ್ಲ. ಈ ವಿಷಯದಲ್ಲಿ ಈ ದೇಶದ ವಿಜ್ಞಾನಿಯಾಗಿರುವಂಥ ರಾಜಾರಾಮಣ್ಣನವರು ಏತಕ್ಕೆ ದೂರು ಕೊಟ್ಟಿದ್ದಾರೋ ನನಗಂತೂ ಅರ್ಥವಾಗುವುದಿಲ್ಲ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಪ್ರಾರ್ಥನೆಗೆ ಅಡ್ಡಿ ಮಾಡದಂತೆ ಸೂಚನೆ ಕೊಡಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ಸಂಬಂಧಪಟ್ಟ ಮಸೀದಿಯವರು ಸರ್ಕಾರದಿಂದ ಪರವಾನಿಗೆಯನ್ನೇ ತೆಗೆದುಕೊಂಡಿಲ್ಲ. ಇವರನ್ನು ಕೇಳಿದಾಗ ಪ್ರತಿಕ್ರಿಯೆಯಲ್ಲಿ ಎಲ್ಲಾ ಧರ್ಮದವರಿಗೂ ರಾಜ್ಯಾಂಗದ ಕೆಳಗೆ ಪ್ರಾರ್ಥನೆ ಸಲ್ಲಿಸುವ ಹಕ್ಕು ಇದೆ. ಒಂದು ಮಸೀದಿಯ ಸುತ್ತಮುತ್ತ ಒಂದೇ ಧರ್ಮದ ಜನ ಇರುವುದಿಲ್ಲ. ಬೆಳಿಗ್ಗೆ ೫–೩೦ಕ್ಕೆ ಪ್ರಾರ್ಥನೆ ಪ್ರಾರಂಭವಾದರೆ, ಹೆಚ್ಚಿನ ಧ್ವನಿಯಲ್ಲಿ ಆದರೆ ಜನರಿಗೆ ತೊಂದರೆಯಾಗುತ್ತದೆ. ಕೆಲವರು ೬ ಗಂಟೆಯವರೆಗೂ ಮಲಗುತ್ತಾರೆ. ಇದೂ

ಕೂಡ ನಾಗರೀಕರ ಹಕ್ಕು ಬೇರೆಯವರಿಗೆ ಕಿರುಕುಳ ಆಗದಂತೆ ಕಡಿವೆ ಧ್ವನಿಯಲ್ಲಿ ಪ್ರಾರ್ಥನೆ ಮಾಡಿದರೆ ಒಳ್ಳೆಯದು.

ಶ್ರೀ ಎ. ಎಂ. ಹಿಂಡಸ್ಗೇರಿ.— ಮುಂಜಾನೆ ಐದೂವರೆ ಗಂಟೆಗೆ ಅಜಾನ್ ಕೊಡುತ್ತಾರೆ. ಅದು ಒಂದು ನಿಮಿಷದಲ್ಲಿ ಎಂಡ್ ಆಗುತ್ತದೆ. ಒಂದು ನಿಮಿಷದಲ್ಲಿ ಈ ಸ್ಲೋಗನ್‌ನಿಂದ ಜನರಿಗೆ ಕರೆಯುತ್ತಾರೆ. ಎಲೆಕ್ಷನ್ ಪ್ರಚಾರ, ಸಿನಿಮಾ ಪ್ರಚಾರದಂತೆ ಅರ್ಧ ತಾಸಿನವರೆಗೆ ಮಾಡುವುದಿಲ್ಲ. ಒಂದು ನಿಮಿಷದಲ್ಲಿ ಅಜಾನ್ ಕೊಡುತ್ತಾರೆ, ಅದಕ್ಕೆ ಂತಲೂ ಜಾಸ್ತಿ ಸಮಯ ಉಪಯೋಗ ಮಾಡುವುದಿಲ್ಲ.

ಶ್ರೀ ಎಸ್. ಆರ್ ಬೊಮ್ಮಾಯಿ.— ಪೋಲೀಸ್ ಕಾಯ್ದೆ ಪ್ರಕಾರ ಬೆಳಗಿನ ೬ ಗಂಟೆ ಇದೆ. ಕೇಂದ್ರದ ಕಾನೂನು ತಿದ್ದುಪಡಿಯಾಗುವವರೆಗೂ ಕಾನೂನು ಉಲ್ಲಂಘನೆ ಮಾಡುವುದು ಸರಿಯಲ್ಲ. ಬೇರೆಯವರಿಗೆ ತೊಂದರೆಯಾಗದಂತೆ ಕಡಿವೆ ಧ್ವನಿಯಲ್ಲಿ ಮಾಡಿ ಎಂದು ಹೇಳುತ್ತೇನೆ.

ಬೀದರ್‌ನಲ್ಲಿ ನಡೆದ ಗಲಭೆಗಳಿಂದ ಉಂಟಾದ ಹಾನಿಯ ಬಗ್ಗೆ

೪೦೭೨. **ಶ್ರೀ ಮೊಹಮ್ಮದ್ ಲೈಕುದ್ದೀನ್ (ಬೀದರ್)** —ಮಾನ್ಯ ಮುಖ್ಯ ಮಂತ್ರಿಗಳ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಬೀದರಿನಲ್ಲಿ ೧೪ ರಿಂದ ೧೬ನೇ ಸೆಪ್ಟೆಂಬರ್ ೧೯೮೮ರ ವರೆಗೆ ನಡೆದ ಗಲಭೆಯಲ್ಲಿ ಒಟ್ಟು ಆಸ್ತಿ ಪಾಸ್ತಿಗೆ ಮತ್ತು ಜೀವಕ್ಕೆ ಸಂಭವಿಸಿದ ಹಾನಿಯೆಷ್ಟು ?

(ಆ) ಮೃತಪಟ್ಟವರ – ಗಾಯಗೊಂಡವರ ಹಾಗೂ ಸುಡಲ್ಪಟ್ಟ ಅಥವಾ ಹಾನಿಗೀಡಾದ ಮನೆಗಳ ಮತ್ತು ಅಂಗಡಿಗಳ ಸಂಖ್ಯೆ ಎಷ್ಟು ?

(ಇ) ಗಲಭೆಯಲ್ಲಿ ಬಂಧಿಸಿದ ವ್ಯಕ್ತಿಗಳ ಸಂಖ್ಯೆ, ಪೋಲೀಸರು ದಾಖಲು ಮಾಡಿದ ಮೊಕದ್ದಮೆಗಳ ಸಂಖ್ಯೆ ಎಷ್ಟು ?

(ಈ) ಹಾನಿಗೊಳಗಾದ ಸಂತ್ರಸ್ತರ ಮತ್ತು ಮೃತರ ಕುಟುಂಬಕ್ಕೆ ಸರ್ಕಾರವು ಒದಗಿಸಿದ ಪರಿಹಾರದ ಮೊತ್ತವೆಷ್ಟು ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

(ಅ)	೧	ಸತ್ತವರು ...	೬ ಮಂದಿ
	೨	ಲೂಟಿಯಿಂದ ಆದ ಆಸ್ತಿ ಪಾಸ್ತಿ ಹಾನಿ ...	೫೨.೦೦ ಲಕ್ಷ ರೂ.
(ಆ)	೧	ಮೃತರು ...	೬ ಮಂದಿ
	೨	ಗಾಯಗೊಂಡವರು (೩೫ ವಿದ್ಯಾರ್ಥಿಗಳು) ...	೪೪ ಮಂದಿ
	೩	ಇತರರು ...	೧೬ ಮಂದಿ
	೪	ಸುಡಲ್ಪಟ್ಟ ಹಾನಿಗೀಡಾದ ಮನೆಗಳು ...	೮೦
	೫	ಹಾನಿಗೀಡಾದ ಅಂಗಡಿಗಳು ...	೧೦
(ಇ)	೧	ಬಂಧಿಸಲ್ಪಟ್ಟವರು ...	೧೨೬ ಜನ
	೨	ದಾಖಲಾದ ಪ್ರಕರಣಗಳು ...	೮೧

(ಈ) ೬ ಜನ ಮೃತರ ಕುಟುಂಬಕ್ಕೆ ತಲಾ ರೂ. ೨೦,೦೦೦ ರಂತೆ ಮತ್ತು ಗಾಯಗೊಂಡವರಿಗೆ ತಲಾ ರೂ. ೫೦೦ ರಿಂದ ೫,೦೦೦ ವರೆಗೆ ವಿತರಿಸಲು ಒಟ್ಟು ೨.೨೦ ಲಕ್ಷ ರೂ ಪರಿಹಾರವನ್ನು ಮಂಜೂರು ಮಾಡಲಾಗಿದೆ. ಹಾನಿಗೊಳ್ಳಪಟ್ಟ ಹಾಗೂ ಕಳೆದುಕೊಂಡ ಆಸ್ತಿಯ ವಿವರ ಅಂದಾಜು ಮಾಡಿದ ನಂತರ ಪರಿಹಾರವನ್ನು ಕೊಡಲಾಗುವುದು.

ನಾನು ಬೀದರ್‌ನಿಂದ ವರದಿ ಬಂದಿದೆ ಎಂದು ನಿನ್ನೆ ಹೇಳಿದ್ದೇನೆ. ಸುಮಾರು ೫೨ ಲಕ್ಷ ರೂಪಾಯಿಯಷ್ಟು ಆಸ್ತಿಪಾಸ್ತಿ ನಷ್ಟವಾಗಿದೆ ಎಂದು ವರದಿ ಬಂದಿದೆ ನಮ್ಮ ನಿಯಮಾವಳಿಗನುಸಾರವಾಗಿ ಎರಡು ಮೂರು ದಿವಸಗಳಲ್ಲಿ ಹಣವನ್ನು ಬಿಡುಗಡೆ ಮಾಡುತ್ತೇವೆ. ಅನಂತರ ಅವರಿಗೆ ಹೆಚ್ಚಿನ